# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಭದ್ರಾವತಿ.

**ಸಿ.ಸಿ. ನಂಃ 141/2024**

ಪಿರ್ಯಾದಿಃ ಶ್ರೀಮತಿ ಶಬಾನಾ ಖಾನಂ

ವಿರುದ್ಧ

ಆರೋಪಿಃ ಮೊಹಮ್ಮದ್ ಅಶ್ರಫ್

ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ 1: ಇದುವರೆಗೂ ವಿಚಾರಣೆ ಮಾಡಲಾದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿ ಅರ್ಥ ಮಾಡಿಕೊಂಡಿರುವಿರಾ?

ಉತ್ತರ :

ಪ್ರಶ್ನೆ 2: **ಫ್ರಾಸಾ-1 ರವರು ಸಾಕ್ಷಿ ನುಡಿಯುತ್ತಾ,** ಆರೋಪಿಯಾದ ನೀವು ತನಗೆ ಪರಿಚಿತರಿದ್ದು, ನಿಮ್ಮ ಮನೆಯ ಖರ್ಚು ವೆಚ್ಚಗಳಿಗೆ 2020 ನೇ ಇಸವಿ ನವೆಂಬರ್ ತಿಂಗಳಿನಲ್ಲಿ ರೂ.3,00,000/- ಹಣವನ್ನು ಸಾಲವಾಗಿ ತನ್ನಿಂದ ಪಡೆದು 01 ವರ್ಷದ ನಂತರ ಮರುಪಾವತಿಸುವುದಾಗಿ ವಿಶ್ವಾಸ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ 3: **ಫ್ರಾಸಾ-1 ರವರು ಮುಂದುವರೆದು,** ಸದರಿ ಸಾಲದ ಮರುಪಾವತಿಗೆ ನೀವು ದಿನಾಂಕ **26.10.2023** ಎಂದು ನಮೂದಿಸಿದ ಬ್ಯಾಂಕ್ ಆಫ್ ಬರೋಡಾ, ಭದ್ರಾವತಿ ಶಾಖೆ, ಭದ್ರಾವತಿ ಚೆಕ್ ಸಂಃ **000032** ಎಂದು ಇರುವ ಒಂದು ಪೋಸ್ಟ್ ಡೇಟೆಡ್ ಚೆಕ್ ಅನ್ನು ಸಾಲದ ಹಣದ ನಗದಿಕರಣಕ್ಕೆ ತನಗೆ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ 4: **ಫ್ರಾಸಾ-1 ರವರು ಮುಂದುವರೆದು,** ಆರೋಪಿಯಾದ ನಿಮ್ಮ ಸೂಚನೆಯ ಅನುಸಾರ ನೀವು ಕೊಟ್ಟ ಚೆಕ್ ಅನ್ನು ತಾನು ದಿನಾಂಕ **26.10.2023** ರಂದು ತನ್ನ ಬ್ಯಾಂಕ್ ಖಾತೆ ಇರುವ ಕೆನರಾ ಬ್ಯಾಂಕ್, ಹಿರಿಯೂರು ಶಾಖೆಯಲ್ಲಿ

ನಗದಿಕರಣಕ್ಕೆಂದು ಹಾಜರುಪಡಿಸಿದಾಗ 'Funds Insufficient' ಎಂಬ ಕಾರಣಕ್ಕೆ ಚೆಕ್ ಅಮಾನ್ಯಗೊಂಡಿದ್ದು, ಈ ಸಂಬಂಧ ಬ್ಯಾಂಕಿನವರು ದಿನಾಂಕ 09.11.2023 ರಂದು ಹಿಂಬರಹ ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ :

ಪ್ರಶ್ನೆ 5: **ಫಿರ್ಯಾದಿ-1 ರವರು ಮುಂದುವರೆದು,** ಆರೋಪಿಯಾದ ನಿಮಗೆ ದಿಃ 24.11.2023 ರಂದು ಕಾನೂನು ತಿಳುವಳಿಕೆ ಪತ್ರವನ್ನು ವಕೀಲರ ಮೂಲಕ ನೊಂದಾಯಿತ ಅಂಚೆಯ ಮೂಲಕ ಕಳುಹಿಸಿ 15 ದಿನಗಳ ಒಳಗೆ ಸಾಲದ ಹಣವನ್ನು ಮರುಪಾವತಿಸಬೇಕೆಂದು ಸೂಚನೆ ನೀಡಿದ್ದು, ಸದರಿ ತಿಳುವಳಿಕೆ ಪತ್ರವು ನಿಮಗೆ ಜಾರಿಯಾಗಿದ್ದರೂ ಸಹ ಹಣವನ್ನು ತನಗೆ ಮರುಪಾವತಿಸಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರ :

ಪ್ರಶ್ನೆ 6: ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯೇ?

ಉತ್ತರ :

ಪ್ರಶ್ನೆ 7: ನಿಮ್ಮ ಪರ ಯಾರಾದರೂ ಸಾಕ್ಷಿ ಇದ್ದಾರೆಯೇ?

ಉತ್ತರ :

(ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಮಾಡಿಕೊಂಡಿದ್ದು ಅವರು ಹೇಳಿದ ಉತ್ತರವನ್ನು ಯಥಾವತ್ತಾಗಿ ದಾಖಲು ಮಾಡಿಕೊಂಡಿದ್ದೇನೆಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ **16.03.2026**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,

ಭದ್ರಾವತಿ.

ಆರೋಪಿ ಸಹಿಃ